# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್‌ಸಿ ನಂ. 05/2021

ಸಿಡಬ್ಲು: 15 / ಪಿಡಬ್ಲು: 7

ದಿನಾಂಕಃ 18.03.2026

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ನವೀನ ಮಡಿವಾಳ |
| ತಂದೆ ಹೆಸರು | : | ಕೆರೆಸ್ವಾಮಿ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ ಸ್ಥಳ | : | ಜಡ್ಡಿಹಳ್ಳಿ ಗ್ರಾಮ, ತಾಃ ಸೊರಬ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

1. ನಾನು 2020 ರಲ್ಲಿ ಹುಬ್ಬಳ್ಳಿಯ ಸಿದ್ಧಾರೂಢ ಮಠದ ಹತ್ತಿರ ಇರುವ ಬೃಂದಾವನ ಲಾಡ್ಜನಲ್ಲಿ ಮ್ಯಾನೇಜರ ಆಗಿ ಕೆಲಸ ಮಾಡಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿಃ 29.09.2020 ರಂದು, ನರಗುಂದ ಪೋಲೀಸರು ಸದರಿ ಬೃಂದಾವನ ಲಾಡ್ಜಗೆ ಬಂದು, ರಜಿಸ್ಟರ ಪರಿಶೀಲಿಸಬೇಕೆಂದು ಹೇಳಿದರು. ಆಗ ನಾನು ರಜಿಸ್ಟರನ್ನು ಪೋಲೀಸರಿಗೆ ಕೊಟ್ಟೆನು. ಆರೋಪಿಯು ನಮ್ಮ ಲಾಡ್ಜನಲ್ಲಿ ರೂಮನ್ನು ಬುಕ್ ಮಾಡಿದ್ದರೋ, ಇಲ್ಲವೋ ಎಂದು ಪರಿಶೀಲಿಸಬೇಕಾಗಿದೆ ಎಂದು ನನಗೆ ಪೋಲೀಸರು ಹೇಳಿದರು. ಸದರಿ ರಜಿಸ್ಟರನಲ್ಲಿ ಆರೋಪಿಯು ರೂಮ್ ನಂ. 303 ನ್ನು ಬುಕ್ ಮಾಡಿದ ಬಗ್ಗೆ ನಮೂದು ಇತ್ತು. ಪೋಲೀಸರು ಸದರಿ ರೂಮನ್ನು ತೋರಿಸಲು ಹೇಳಿದಂತೆ ನಾನು ಸದರಿ 303 ನೇ ರೂಮನ್ನು ಪೋಲೀಸರಿಗೆ ತೋರಿಸಿರುತ್ತೇನೆ. ಪೋಲೀಸರ ಜೊತೆಗೆ ಒಬ್ಬ ಹೆಣ್ಣುಮಗಳು ಬಂದಿದ್ದಳು. ಸದರಿ ಮಹಿಳೆ ಯಾವ ಕಾರಣಕ್ಕೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಪೋಲೀಸರು ಸದರಿ ರೂಮಿನಲ್ಲಿ ಮಹಜರ ಮಾಡಬೇಕೆಂದು ಹೇಳಿದರು. ಪೋಲೀಸರು ಮಹಜರನ್ನು ಜರುಗಿಸಿದರು.

3. ಈಗ ತೋರಿಸಿದ ದಾಖಲೆಯು ಬೃಂದಾವನ ಲಾಡ್ಜಗೆ ಸಂಬಂಧಿಸಿದೆ ಎಂದರೆ ಸರಿ. (ಸದರಿ ದಾಖಲೆಯಲ್ಲಿ ಸಾಕ್ಷಿಯ ಸಹಿ ಇಲ್ಲದೇ ಇದ್ದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.)

4. ಈಗ ಪ್ರಕಾಶ ಪೂಜಾರ ರವರನ್ನು ನೋಡಿದರೆ ನನಗೆ ಗುರುತಿಸಲು ಸಾಧ್ಯವಿಲ್ಲ.

ನ್ಯಾಯಾಲಯದ ಮುಂದೆ ಇರುವ ಆರೋಪಿ ನಮ್ಮ ಲಾಡ್ಜಗೆ ಬಂದಿದ್ದರೋ, ಇಲ್ಲವೋ ಎಂದು ಹೇಳಲು ಸಾಧ್ಯವಿಲ್ಲ. ನಮ್ಮ ಲಾಡ್ಜಗೆ ಸಿಸಿ ಕ್ಯಾಮೆರಾ ಅಳವಡಿಸಲಾಗಿತ್ತು. ಈಗ ತೋರಿಸಿದ ನಿಪಿ-6 ಫೋಟೋ ಬೃಂದಾವನ ಲಾಡ್ಜನ ರೂಮ್ ನಂ.303 ಕ್ಕೆ ಸಂಬಂಧಿಸಿದ್ದಾಗಿದೆ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-6 ರ ಫೋಟೋದಲ್ಲಿ ಕ್ರಮ ಸಂಖ್ಯೆ: 1 ಎಂದು ಗುರುತಿಸಿರುವ ಮಹಿಳೆ ಆ ದಿನ ನಮ್ಮ ಲಾಡ್ಜಗೆ ಪೋಲೀಸರ ಜೊತೆ ಬಂದಿದ್ದಳು. ನಿಪಿ-6 ಫೋಟೋವನ್ನು ದಿಃ 29.09.2020 ರಂದು ಮಹಜರ ಮಾಡುವ ಕಾಲಕ್ಕೆ ತೆಗೆದಿರುತ್ತಾರೆ.

5. ಆ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

**ಪಾಟಿ ಸವಾಲುಃ ಪಿಪಿಯವರಿಂದಃ**

6. ನಾನು ದಿನಾಂಕಃ 30.09.2020 ರಂದು ಈಗ ಓದಿ **ಹೇಳಿದ " ನಿನ್ನೆಯ ದಿವಸ ದಿನಾಂಕಃ 29.09.2020 ರಂದು.........................ಮದ್ಯಾಹ್ನ 02.30 ಗಂಟೆಯಿಂದ 03.30 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ." ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-12 ಎಂದು ಮತ್ತು ಸಂಬಂಧಿಸಿದ ಭಾಗವನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.**

7. ಸಾಕ್ಷಿ ಮುಂದುವರೆದು, ಪೋಲೀಸರು ಲೆಡ್ಜರ ಪ್ರತಿ ಬೇಕು ಎಂದು ಕೇಳಿದಾಗ, ನಾನು ಅವರಿಗೆಅದನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

**ಪಾಟಿ ಸವಾಲುಃ ಶ್ರೀ ಎಸ್.ಬಿ. ಘಟ್ಟಿರೆಡ್ಡಿಹಾಳ, ಆರೋಪಿ ಪರ ವಕೀಲರಿಂದಃ**

8. ನಾನು ಬೃಂದಾವನ ಲಾಡ್ಜನಲ್ಲಿ ಲಾಕ್ ಡೌನ ಅವಧಿಯಲ್ಲಿ ಮೂರು ತಿಂಗಳುಗಳ ಕಾಲ ಕೆಲಸ ಮಾಡಿದ್ದೇನೆ. ಲಾಕ್ ಡೌನ ಅವಧಿಯಲ್ಲಿ ಸರ್ಕಾರಿ ಆದೇಶದ ಪ್ರಕಾರ ಖಾಸಗಿ ವ್ಯಕ್ತಿಗಳಿಗೆ ರೂಮುಗಳನ್ನು ಕೊಡಬಾರದು ಎಂದು ಆದೇಶ ಇತ್ತು ಎಂದರೆ ಸರಿ.

9. ಒಬ್ಬ ವ್ಯಕ್ತಿಗೆ ಲಾಡ್ಜನಲ್ಲಿ ರೂಮ ಕೊಡಬೇಕಾದರೆ, ಆತನ ವಿವರ ಹಾಗೂ ಆತನ ಜೊತೆ ಬಂದ ವ್ಯಕ್ತಿಗಳ ವಿವರ ಹಾಗೂ ಯಾವ ಉದ್ದೇಶಕ್ಕೆ ಬಂದಿದ್ದರು ಎಂದು ನಮೂದು ಮಾಡಲಾಗುತ್ತದೆ ಎಂದರೆ ಸರಿ. ಪೋಲೀಸರು ನಮ್ಮ ಲಾಡ್ಜನ ನೋಂದಣಿಯ ಪೂರ್ಣ ಪುಸ್ತಕವನ್ನು ಜಪ್ತ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

10. ನಿಪಿ-6 ಫೋಟೋದಲ್ಲಿ ರೂಮ ನಂಬರ ಕಾಣಿಸುವುದಿಲ್ಲ ಎಂದರೆ ಸರಿ. ನಿಪಿ-6 ರ ಫೋಟೋ ನಮ್ಮ ಲಾಡ್ಜಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ನಾನು ಇದ್ದಂತಹ ಸಮಯದಲ್ಲಿ ನ್ಯಾಯಾಲಯದಲ್ಲಿರುವ ಆರೋಪಿ ನಮ್ಮ ಲಾಡ್ಜಗೆ ಬಂದಿದ್ದನೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**